Q.P. Code – 32105

# First Semester B.Com./B.B.M./B.H.M. Degree Examination, October/November 2019

*(CBCS – Semester Scheme – New)*

## ಕನ್ನಡ ಭಾಷೆ

## Paper I – ಕಾವ್ಯ ನಂದನ – 1 ಮತ್ತು ನಾಟಕ – ಸಿರಿಸಂಪಿಗೆ

*Time : 3 Hours]* *[Max. Marks : 90*

ಭಾಗ – 1

ಕಾವ್ಯ ನಂದನ – ೧

I. (ಅ) ಒಂದು ಪದ್ಯದ ವಿಶೇಷವನ್ನು ವಿವರಿಸಿ : **(1 × 6 = 6)**

1. ದೇಹಾರವ ಮಾಡುವಣ್ಣಗಳಿರಾ
ಒಂದು ತುತ್ತು ಆಹಾರವನಿಕ್ಕಿರೆ
ದೇಹಾರಕ್ಕೆ ಆಹಾರವೇ ನಿಚ್ಚಣಿಗೆ
ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ
ಆ ಹರನಿಲ್ಲೆಂದನಂಬಿಗರ ಚೌಡಯ್ಯ!

2. ಮಾಡದೊಡೆ ತಾಯ್ಗೆ ಮರಣಂ
ಮಾಡಿದೊಡೆನ್ನೊಂದು ಗತಿಗೆ ಕೇಡಿಂದೇನಂ
ಮಾಡುವನೆಂದಾಂದೋಳಮ
ನಾಡೆ ಮನಂ ತಮಮನಪ್ಪುಕಯ್ದುನಿಳೆಶಂ.

(ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : **(3 × 3 = 9)**

1. ಹೆಣ್ಣು ಮಗಳು ನಾ ಸಣ್ಣಾಗಿ ಹೇಳ್ತೀನಿ
ಅಣ್ಣ ಮಾಡಿದಾಟವ ನಿಮಗ.

2. ಹುತ್ತವ ಬಡಿದರೆ ಉರಗ ಸಾವುದೆ ಅಯ್ಯ?

3. ಕಾವರೆ ಕಣೆಗೊಳ್ಳೊಡಬ್ಬೆ ಬಾರಿಪರೊಳರೇ.

4. ಹೆಣದ ಬಾಯಿಗೆ
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕವೆಂದ

5. ಉಂಟಾದತನ ತಪ್ಪಿ ಬಡತನ ಬಂದರೆ
ಒಂಟಿಯಂತೆ ಗೋಣ ಮೇಲೆತ್ತುವರು.

SREE SIDDAGANGA COLLEGE OF ARTS, SCIENCE & COMMERCE FOR WOMEN TUMKUR. LIBRARY & INFORMATION CENTRE Page No ........ Date ........

(ಇ) ಎರಡು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ : **(2 × 5 = 10)**

1. ಅಕ್ಕಮಹಾದೇವಿ
2. ಕೀರ್ತನ ಸಾಹಿತ್ಯ
3. ನಾಗರ ಪಂಚಮಿ

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. 'ಯಶೋಧರ ಚರಿತೆ' ಕೃತಿಯ ಕರ್ತೃ ಯಾರು?
2. ಭರತನ ಸಹೋದರನ ಹೆಸರೇನು?
3. 'ರಂಗವಿಠಲ' ಇದು ಯಾವ ಕೀರ್ತನಕಾರರ ಅಂಕಿತ
4. 'ಪ್ರಭುಲಿಂಗಲೀಲೆ' ಕೃತಿಯ ಕರ್ತೃ ಯಾರು?
5. ದ್ರೌಪದಿ ಯಾರ ಮನೆಯಲ್ಲಿ ತೊತ್ತಾಗಿದ್ದಳು?

II. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಬಾಹುಬಲಿಯ ಮಹೋನ್ನತ ವ್ಯಕ್ತಿತ್ವ ಪಂಪನ ಕಾವ್ಯಭಾಗದಲ್ಲಿ ವ್ಯಕ್ತವಾದ ಬಗೆಯನ್ನು ವಿವರಿಸಿ?
2. 'ರಾಮಧಾನ್ಯದ ಮಹಿಮೆ' ಪದ್ಯದ ಆಶಯವನ್ನು ಕುರಿತು ಬರೆಯಿರಿ.
3. ಸರ್ವಜ್ಞನ ವಚನಗಳಲ್ಲಿನ 'ಸಾಮಾಜಿಕ ನೀತಿ' ಬೋಧನೆಯನ್ನು ವಿವರಿಸಿ.

## ಭಾಗ – 2

## ನಾಟಕ – ಸಿರಿಸಂಪಿಗೆ

III. (ಅ) ಒಂದರ ಸ್ವಾರಸ್ಯವನ್ನು ಕುರಿತು ಬರೆಯಿರಿ : **(1 × 5 = 5)**

1. ಬೇಡವೆಂದು ಮತ್ತೆ ಮತ್ತೆ ಹೇಳಿ ನಮ್ಮ ಗಾಬರಿಗಳಿಗೆ ನೀರೆರೆಯ ಬೇಡ ಮಗನೆ. ಶಾಪಗಳಿಂದ, ನಿಟ್ಟುಸಿರುಗಳಿಂದ ಬೆಂದ ವಂಶ ನಮ್ಮದು. ಕುಲದೇವರ ಅಹಂಕಾರ ಕೊಂಕದ ಹಾಗೆ, ಕೆಟ್ಟದೈವಂಗಳ ದೃಷ್ಟಿತಾಗದ ಬಾಗೆ ತಪ್ಪಿಸಿ ಜಪ್ಪಿಸಿ ನಿನ್ನ ಬೆಳೆಸಿದ್ದಾಗಿದೆ. ಬೆವರಿಳಿಸಿ ಬೆಳೆಸಿದ ಸಸಿಯನ್ನು ಯಾವುದೋ ಸುಂಟರಗಾಳಿ ಬಂದು ಎತ್ತಿಕೊಂಡು ಹೋದರೆ ವಂಶದ ಗತಿಯೇನು ಕಂದಾ? ಇಷ್ಟು ದಿನ ಮಾಡಿದ ಹಟ ಇನ್ನು ಸಾಕು ನಿನ್ನ ಮದುವೆಯ ಚಿಂತೆಯಲ್ಲೇ ನಿನ್ನ ತಾಯಿ ನೊಂದು ಬೆಂದು ಸಾಯುವುದು ನಿನಗಿಷ್ಟವಿಲ್ಲ ತಾನೆ?

2. ತಾವು ಮಧ್ಯೆ ಬಾಯಿ ಹಾಕಿ ಮಾತನಾಡಿದ್ದು ಸಾರ್ಥಕವಾಯಿತು ತಾಯಿ. ಹಿಂದೊಮ್ಮೆ ಪ್ರಭುಗಳನ್ನು ಸೀಳುವುದಕ್ಕೆ ಸಾಕ್ಷಿಯಾಗಿ ನಮ್ಮ ಕಣ್ಣು ಮನಸ್ಸಿಗೆ ಬೇಕಾದಷ್ಟು ದೊಡ್ಡ ಗಾಯ ಮಾಡಿಕೊಂಡಾಗಿದೆ. ಈಗ ಈ ಹುಚ್ಚಿಗೆ ಸಾಕ್ಷಿಕರಾಗಿ ನಮ್ಮ ಆತ್ಮಗಳಿಗೆ ಗಾಯಮಾಡಿಕೊಳ್ಳಲು ನಮಗಿಷ್ಟವಿಲ್ಲ – ಇಗೋ ಹೊರಟೆವು.

(ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : (3 × 2 = 6)

1. ನೀರಿನ ಪ್ರತಿಬಿಂಬವನ್ನು ಈ ಪರಿ ಪ್ರೀತಿಸಿದರುಂಟೆ
2. ರಾಜನಿಗೆ ಅನ್ಯಾಯವಾದಾಗ ಸಮಸ್ತರು ನ್ಯಾಯ ಕೊಡಬೇಕಾದ್ದು ಧರ್ಮ.
3. ಇದೇನು ಮಹಾರಾಜ ಯುದ್ಧದ ಸಿದ್ಧತೆಯಲ್ಲಿರುವಂತಿದೆ.
4. ಕುಲವನ್ನು ಎಂಜಲಿಸಿದಾಗಲೇ ಆ ಪದವಿಯನ್ನು ಅವಳು ಕಳೆದುಕೊಂಡಳು.

(ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ : (1 × 4 = 4)

1. ಚಂದ್ರಶೇಖರ ಕಂಬಾರ
2. ಕಮಲ

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : (5 × 1 = 5)

1. ಮಾಯಾವತಿಯ ಪತಿಯ ಹೆಸರೇನು?
2. ಪುಷ್ಪರಾಜನ ಮಗಳು ಯಾರು?
3. ಜವಳಿ ಯಾರನ್ನು ಮದುವೆಯಾದನು?
4. ಶಿವನಾಗದೇವನ ಪ್ರತಿರೂಪ ಯಾರು?
5. ರಾಜಕುಮಾರನ ಕನಸಿನಲ್ಲಿ ಬರುತ್ತಿದ್ದ ಕನ್ಯೆ ಯಾರು?

IV. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2 × 10 = 20)

1. ಶಿವನಾಗದೇವ ಮತ್ತು ಕಾಳಿಂಗರ ನಡುವಿನ ಹೋರಾಟದ ಸಂದರ್ಭವನ್ನು ಕುರಿತು ಬರೆಯಿರಿ..
2. ಅವಳಿ–ಜವಳಿ ಪಾತ್ರಗಳ ವೈಶಿಷ್ಟ್ಯವನ್ನು ಚರ್ಚಿಸಿ.
3. ಹಿರಿಯರು, ಭಾಗವತ, ಮಾಯಾವತಿ – ಇವರಲ್ಲಿ ಇಬ್ಬರ ಪಾತ್ರಗಳನ್ನು ಪರಿಚಯಿಸಿ.

---